ಬಿಟಕಂಡು ಎಮ್ಮೆ ಹಾಲು ಹಿಂಡಕ ಎಣ್ಣೆ ದೊಡ್ಡ ತಪೆಲಿ ತಗೊಂಡು ಹೋದಳು.

ಭಾಗ 4

ಬ್ಯಾಸಿಗಿ ರಣರಣ ಬಿಸಿಲು ಎಂಥವರನ್ನು ಹಣ್ಣುಗಾಯಿ ನೀರುಗಾಯಿ ಮಾಡಿತ್ತು. ಒಂದೇ ಒಂದು ಗಿಡದ ತಪ್ಪಲು ಅಲುಗಾಡುತ್ತಿರಲಿಲ್ಲ. ಕುಂತು ಕುಂತಲ್ಲೇ ನಿಂತು ನಿಂತಲ್ಲೇ ಜನ ನೀರಿಗೆ ನೀರು ಬಸಿಯುತ್ತಿದ್ದರು. ನಿಂಗ್ಯಾನ ಮಾವ ತಪ್ಪನೆ ಮಳೆಗೆ ತೋಯ್ದವರಂಗ ಆಗಿ ಮೇಲಿಂದ ಮೇಲೆ ಟವಲಿಲೆ ಹಣೆ ಮುಖ ಒರಸಿಕೊಳ್ಳುತ್ತಿದ್ದ. ಶಾರದಮ್ಮ ತುಂಬು ಸೆರಗು ಒದಕಂಡು ತಲೆಬಗ್ಗಿಸಿಕಂಡು ಕುಳಿತ್ತಿದ್ದಳು. ನಿಂಗ್ಯಾ ಸುಡುಬಿಸಿಲನ್ನು ಲೆಕ್ಕಿಸದೆ ಒದರಾಡುತ್ತಿದ್ದ. ಶಾರದಮ್ಮ ಕೈಮುಗಿಯುತ್ತಾ, 'ನಿಂಗ್ಯಾ ಮೆಲ್ಲಾಗ ಮಾತಾಡು. ಮಂದಿ ಕಲಿಸಿ ಮಾರ್ಯಾದೆ ಕೆಡಸಬ್ಯಾಡ' ಅಂತ ಬೇಡಿಕೊಳ್ಳುತ್ತಿದ್ದಳು. ಆದರೂ ನಿಂಗ್ಯಾ ಕೇಳದೆ ತಾಯಿಗೆ ಮಾವನಿಗೆ ಬಾಯಿಗೆ ಬಂದಂತೆ ಬೈಯುತ್ತಾ ಹೆಂಡತಿ ಕಡೆ ಕೈ ತೋರಿಸಿ, 'ಒಂದು, ಆ ನಡತೆಗೆಟ್ಟವಳು ಮನೇಲ್ಲಿರಬೇಕು, ಇಲ್ಲ ನಾನಿರಬೇಕು' ಎಂದ ದೃಢ ನಿರ್ಧಾರದಲ್ಲಿ. ಶಾರದಮ್ಮಗೆ ನಿಂಗ್ಯಾಗೆ ಜಗಳ ಬಿತ್ತು. ಎಷ್ಟು ತಿಳಿಹೇಳಿದರೂ ಮಗ ಮಣಿಲಿಲ್ಲ. ಹೆಂಡತಿ ಮನೇಲಿ ಇರಬಾರದು. ನನ್ನಂಥವನ ಜೊತೆ ಆಕೆ ಸಂಸಾರ ಮಾಡುವುದು ಅಸಾಧ್ಯದ ಮಾತು ಅಂತ ಕಡ್ಡಿತುಂಡು ಮಾಡಿ ನುಡಿದ. ಕಲ್ಲಿನಂತೆ ಕುಳಿತಿದ್ದ ಮಾವ ನಿಂಗ್ಯಾನ ಕಡಿ ತಿರುಗಿ, 'ನಿಂಗ್ಯಾ, ನೀ ತಪ್ಪು ತಿಳಿಕಳಲ್ಲ ಅಂದ್ರ ಒಂದು ಮಾತು. ನೀ ನನ್ನ ಮಗಳ ಕಳಿಸು ಬ್ಯಾಡ ಅನ್ನಲ್ಲ. ಏಕೆಂದರೆ ಆಗಲೇ ನನ್ನ ಮನೇಲಿ ಗಂಡ ಬಿಟ್ಟುಬಂದ ದೊಡ್ಡ ಮಗಳು ಇದಾಳ. ಅಸ್ತಮಾ ಬಂದ ನಿಮ್ಮ ಅತ್ತೆ ಇದಾಳ. ನನ್ನ ಮಗ ಸೊಸೆ ಮದುವೆಯಾದ ತಿಂಗಳಿಗೆ ಬ್ಯಾರೆ ಆಗಿ ಅವರು ಬಿಟ್ಟು ಹೋದ ಮೂರು ನಾಲ್ಕು ಲಕ್ಷ ಸಾಲ ಅದ್ಕ ಬಡ್ಡಿ ಐತ್ಯಾ. ಅದರ ಮ್ಯಾಲಾ ಈ ನನ್ನ ಮಗಳು ನನಗೇನು ವಜ್ಜ್ಯಾ ಆಗಲ್ಲ. ನೀ ತಿಳಿದಾತ ಇದ್ದಿ, ಸಾಲಿ ಓದಿದಿ, ಈ ಮಗಳೂ ಮನೇಲಿ ಬಂದು ಕುಂತರೆ ಜನ ಆಡಿಕೊಳ್ಳತಾರ. ನಿನ್ನ ಮಾನ ನಮ್ಮ ಮಾನ ಮರ್ಯಾದೆ ಎಲ್ಲಾ ಹಾಳಾಗತದ. ನಾ ನನ್ನ ಮಗಳಿಗೆ ಬುದ್ಧಿ ಹೇಳತೀನಿ, ಒಂದು ಚಾನ್ಸ್ ಕೊಡು' ಅಂತ ಬೇಡಿಕೊಂಡ. ನಿಂಗ್ಯಾನ ತಾಯಿ ಶಾರದಮ್ಮ, 'ನನ್ನ ತವರು ಮನಿ ನಡುಬೀದಿಗೆ ಬರುತ್ತೆ ನಿಂಗ್ಯಾ. ಆ ಹುಡುಗಿಗೆ ನಾನು ಬುದ್ಧಿ ಹೇಳತೀನಿ. ಇದೊಂದು ಸಲ ದೊಡ್ಡ ಮನಸ್ಸು ಮಾಡಿ ಕ್ಷಮಿಸಪ್ಪಾ' ಅಂತ ಕಣ್ಣೀರು ತೆಗೆದಳು.

'ನೀವು ನಿಮ್ಮ ಕಷ್ಟ ಹೇಳಿಕಂಡಿರಿ. ಮೀಸೆ ಹೊತ್ತ ರೋಷವೆತ್ತ ಗಂಡಸು ನಾನು, ಈಕೀನ ಕ್ಷಮಿಸುವ ಮಾತೇ ಇಲ್ಲ' ಅಂತ ಕಟಕಟ ಹಲ್ಲು ಕಡಿದ. 'ರೋಷ ಆವೇಷ ಅಂತ ಎಗರಾಡಿದರೆ ನಿನ್ನ ಮಾರ್ಯದೆ ಹೋಗುತ್ತೆ. ನಿಂಗ್ಯಾನ ಹೆಂಡತಿ ಹಂಗಂತೆ ಹಿಂಗಂತೆ ಅಂತ ಜನ ನೂರು ಮಾತಾಡಿ ನಿನ್ನ ಮಾನ ಕಳೀತಾರ, ಇದು ಬೇಕಾ? ಯೋಚನೆ ಮಾಡಪ್ಪ' ಅಂತ ಶಾರದಮ್ಮ ಅಂದಳು. ಒಳಗಿನಿಂದ ಅಳುತ್ತಾ ಬಂದ ನಿಂಗ್ಯಾನ ಹೆಂಡತಿ ತನ್ನ ಕೈಯಲ್ಲಿದ್ದ ಮೊಬೈಲ್ಲನ್ನು ಬೀಸಿ ಒಗೆದಳು. ಮೊಬೈಲ್ ಪುಡಿಪುಡಿಯಾಗಿ ಅದರ ಬ್ಯಾಟರಿ, ಮೊಬೈಲ್‌ನ ಹಿಂದಿನ ಕವರ್, ಆ ಮೊಬೈಲ್‌ನ ಒಂದೊಂದು ಪಾರ್ಟ್ ಒಂದೊಂದು ಕಡಿಗೆ ಬಿದ್ದು ಚೆಲ್ಲಾಪಿಲ್ಲಿಯಾಗಿ ದೂರದೂರ ಹೋಗಿಬಿದ್ದವು.

ಪ್ರತಿಕ್ರಿಯಿಸಿ: feedback@sudha.co.in



ಬದುಕು ಬದಲಿಸಿದ

ಭಾವೇಶ್ ಭಾಟಿಯಾ

ಅಂಧ ಉದ್ಯೋಗ ಜನಕನ ಸಾಹಸಗಾಥೆ

## ಪ್ರತಿಕ್ರಿಯೆ

### ಸ್ಫೂರ್ತಿಗೊಂದು ರೂಪಕ

ಸಾವಿರಾರು ಜನರ ಬದುಕನ್ನೇ ಬದಲಿಸಿದ 'ಭಾವೇಶ್ ಭಾಟಿಯಾ' ಅವರ ಸಾಹಸಗಾಥೆ ಸರ್ವರಿಗೂ ಸ್ಫೂರ್ತಿದಾಯಕವಾದದ್ದು. ಬದುಕಿನ ಬಗೆಗಿನ ಅವರ ಪ್ರೀತಿ, ಹೋರಾಟ, ಸಾಧನೆ, ಯಶಸ್ಸು, ಮೌಲ್ಯಯುತವಾದ ಜೀವನ, ಸಮಾಜದ ಬಗೆಗಿನ ಅವರ ಚಿಂತನೆ ಎಲ್ಲವೂ ಅನುಕರಣೀಯ. ಲೇಖಕಿ ನೇಮಿಚಂದ್ರರ ಬರಹ ಭಾವೇಶ್ ಅವರ ಸಾಧನೆಯನ್ನು ಪರಿಚಯಿಸುವಲ್ಲಿ ಸಂಪೂರ್ಣ ಯಶಸ್ವಿಯಾಗಿದೆ.

—ನಾ.ರಾ. ಜ್ಯೋತಿ, ಬೆಂಗಳೂರು

ಭಾವೇಶ ಭಾಟಿಯಾ ಧಾರಾವಾಹಿ ನಿಜಕ್ಕೂ ಅಪೂರ್ವವಾಗಿತ್ತು.

—ಶಶಿರೇಖಾ

### ಬೆಳಕಿನ ಭರವಸೆ

ಭಾವೇಶ ಭಾಟಿಯಾ ಬದುಕು ನಿಜಕ್ಕೂ ಒಂದು ತುಂಬು ಭರವಸೆಯ ಪಯಣ! ಆಕಾಶವೂ ಮಿತಿಯಲ್ಲ ತೆರೆದ ಕಂಗಳನ್ನು ಕಾಡುವ ಕನಸುಗಳಿಗೆ. ಇಲ್ಲಿ ಕನಸು ಕಂಡು ನನಸಾಗಿಸಿದವರು ಅಂಧ ಸಾಹಸಿ ಭಾವೇಶ ಭಾಟಿಯಾ. ಆ ಕನಸುಗಳಿಗೆ ಬಣ್ಣ ತುಂಬಿ ಹೆಜ್ಜೆ ಹೆಜ್ಜೆಗೆ ಅವರ ಜೊತೆಗೆ ನಿಂದವರು ಅವರ ಪತ್ನಿ ನೀತಾ ಹಾಗೂ ನೂರಾರು ಸಹೃದಯ, ಸಮಾನ ತುಡಿತವುಳ್ಳ ಒಳ್ಳೆಯ ಸ್ನೇಹಿತರು. ಸದಾ ಸಕಾರಾತ್ಮಕ ಜೀವನ, ಯೋಚನೆಗಳ ಪ್ರವರ್ತಕಿ ನೇಮಿಚಂದ್ರರು ತಮ್ಮದೇ ವಿಶಿಷ್ಟ ಕಥಾಶೈಲಿಯಲ್ಲಿ ಈ ಕಾದಂಬರಿ ಮೂಲಕ ಮತ್ತೊಮ್ಮೆ ಮನುಷ್ಯನ ಅಗಾಧ ಕರ್ತೃತ್ವ ಶಕ್ತಿಯಲ್ಲಿ, ಒಳ್ಳೆಯತನದಲ್ಲಿ ಅಪಾರ ಭರವಸೆ ಮೂಡಿಸಿದ್ದಾರೆ.

—ವಿದ್ಯಾ ಶಿರಹಟ್ಟಿ, ಧಾರವಾಡ

ಪ್ರತಿಯೊಂದು ಮಗುವಿಗೆ ತಾಯಿಯೇ ಮೊದಲ ಗುರು ಎನ್ನುವುದಕ್ಕೆ ಭಾವೇಶ್ ಭಾಟಿಯಾ ಅವರೇ ಸಾಕ್ಷಿ. ಧಾರಾವಾಹಿ ಓದುತ್ತಾ ಓದುತ್ತಾ ಮುಗಿದೇಹೋದಾಗ ನಿರಾಸೆ ಆಯಿತು. ಇಂತಹ ಒಂದು ಸಾಹಸ ಕಥೆಯನ್ನು ಓದುಗರಿಗೆ ನೀಡಿದ ಸುಧಾ ಮತ್ತು ಲೇಖಕಿ ನೇಮಿಚಂದ್ರ ಅವರಿಗೆ ವಂದನೆಗಳು

—ಕೆ.ಟಿ. ಸೋಮಯ್ಯ, ವಿರಾಜಪೇಟೆ

### ಜೀವಂತ ದಂತಕತೆ

ಜೀವಂತ ದಂತಕಥೆಯನ್ನು ಸವಿಸ್ತಾರವಾಗಿ ಧಾರಾವಾಹಿಯಾಗಿ ಪ್ರಕಟಿಸಿದ ತಮಗೂ, ಕಣ್ಣಿಗೆ ಕಟ್ಟುವಂತೆ ಬರೆದ ಲೇಖಕಿ ನೇಮಿಚಂದ್ರರವರಿಗೂ ಧನ್ಯವಾದಗಳು. ನೀತಾ ಅವರ ಅವಿರತ ಪರಿಶ್ರಮ ತುಂಬಾ ಹೆಮ್ಮೆ ಪಡುವಂತಹದ್ದು.

—ಕಮಲಾದೇವಿ ಆರ್ ಹಳ್ಳೂರ್,
ಬೆಂಗಳೂರು

### ತುಂಬ ಚೆನ್ನಾಗಿದೆ

ಧಾರಾವಾಹಿ ತುಂಬಾ ಚೆನ್ನಾಗಿ ಮೂಡಿಬಂದಿದೆ. ಅಂಧ ಯುವಕನ ಸಾಹಸ, ಉತ್ಸಾಹ, ಛಲ... ತನಗೆ ಅಂಗವೈಕಲ್ಯ ಇದ್ದರೂ ಅದನ್ನು ಲೆಕ್ಕಿಸದೆ ಮಾಡಿದ ಕೆಲಸ, ಎಲ್ಲವೂ ಸರಿ ಇದ್ದ ವ್ಯಕ್ತಿಯನ್ನು ನಾಚಿಸುವಂತಿದೆ. ಮನುಷ್ಯ ಮನಸ್ಸು ಮಾಡಿದರೆ ಏನನ್ನಾದರು ಸಾಧಿಸಬಹುದು ಎಂದು ತೋರಿಸಿದ್ದಾರೆ. ಜೀವನದಲ್ಲಿ ನಡೆದು ಹೋದ ಘಟನೆಗಳೇ ಧಾರಾವಾಹಿಗಳಾಗಿ ಬರಲಿ.

—ಸುಜಾತ ಬಸವರಾಜ್, ಬೆಂಗಳೂರು